# ಆಹಾ ಸುದ್ದಿ!

★ ಸಸಿತೋಟ



ಪ್ಯಾರಿಸ್‌ನಲ್ಲಿರುವ 'ಒ ನ್ಯಾಚುರಲ್' ಎಂಬ ನಗ್ನಪ್ರೇಮಿಗಳ ಉಪಾಹಾರ ಗೃಹವಿದು. ಬಾಗಿಲಿನಲ್ಲೇ ನಿಮ್ಮ ಅಮೂಲ್ಯವಾದ ಕೋಟ್, ಪ್ಯಾಂಟ್ ಎಲ್ಲವನ್ನೂ ಬಿಚ್ಚಿಟ್ಟು ಬರಬೇಕು, ಜೊತೆಗೆ ಅಷ್ಟೇನೂ ಅಮೂಲ್ಯವಲ್ಲದ ಸಂಕೋಚವನ್ನೂ ಕೂಡ.

ಅಮೆರಿಕಾದ ಐಯೋವಾದಲ್ಲಿ ಬಿಡಿಗಾಸೂ ಕೊಡದೇ ಮೂರು ಅಂತಸ್ತಿನ ಮನೆಯೊಂದರ ಮಾಲೀಕರಾಗಬಹುದು. ಆದರೆ ಷರತ್ತು ಇಷ್ಟೇ– ನೀವದನ್ನು ಯಾವುದೇ ಧಕ್ಕೆ ಮಾಡದೆ ಬೇರೆ ಕಡೆ ಸ್ಥಳಾಂತರಿಸಿಕೊಳ್ಳಬೇಕು. ಚೌಕಾಶಿ ವ್ಯಾಪಾರ ಮಾಡುವವರು ಒಂದು ಕೈ ನೋಡಬಹುದು.



ಸಿಂಗಪುರದಲ್ಲಿ ಐಷಾರಾಮಿ ಹೊಟೇಲ್‌ಗಳಿಗೆ ಕೊರತೆಯಿಲ್ಲ. ಆದರೆ ಮುದ್ದಿನ ಪ್ರಾಣಿಗಳು ಐಷಾರಾಮಿ ಬದುಕು ಅನುಭವಿಸಬೇಡವೇ? ಅದಕ್ಕೆಂದೇ ದಿ ವಾಷಿಂಗ್ಟನ್ ಎಂಬ ಐಷಾರಾಮಿ ಹೊಟೇಲ್ ಅನ್ನು ಮುದ್ದಿನ ಪ್ರಾಣಿಗಳಿಗೆಂದೇ ನಿರ್ಮಿಸಲಾಗಿದೆಯಂತೆ. ಏನು ಮಾಡಬೇಕು ಅಥವಾ ಮಾಡಬಾರದು (ಡೂಸ್ ಆ್ಯಂಡ್ ಡೋಂಟ್ಸ್) ಎಂಬುದನ್ನು ಮಾತ್ರ ಸಾಕುಪ್ರಾಣಿಯ ಮಾಲೀಕ ಓದಿಕೊಂಡು ದಂಡ ಕಟ್ಟಲು ಹೆಚ್ಚುವರಿ ಹಣ ಇಟ್ಟುಕೊಂಡಿರಬೇಕು.



ಇದು ಕೋಬ್ರಾ ಟಾನಿಕ್. ನಾಗರ ಹಾವಿನಿಂದ ತಯಾರಿಸಿದ್ದು. ಆದರೆ ಪುರುಷರು ಮಾತ್ರ ಕುಡಿಯಬಹುದು ಎಂಬ ಸೂಚನೆ ಬಾಟಲ್ ಮೇಲಿದ್ದು, ತಯಾರಕರು ಲಿಂಗ ಅಸಮಾನತೆ ಯಾವಾಗ ಹೋಗಲಾಡಿಸುವರೋ!

ಚೀನಾದಲ್ಲಿ ಗಲ್ಲಿಗಲ್ಲಿಗಳಲ್ಲೂ ಸ್ತ್ರೀಯರ ನೀತಿಪಾಠದ ತರಗತಿಗಳು ಹುಟ್ಟಿಕೊಂಡಿವೆಯಂತೆ. 'ಕಡಿಮೆ ಮಾತನಾಡಿ, ಬಾಯಿ ಮುಚ್ಚಿಕೊಂಡು ಗಂಡಸು ಹೇಳಿದಂತೆ ಕೇಳಿ, ನೀವು ಅಡುಗೆ ಮಾಡಬೇಕೇ ಹೊರತು ತಿನಿಸು ಪೂರೈಸುವಂತೆ ಬೇಡಿಕೆ ಇಡಬೇಡಿ, ಸಮಾಜದಲ್ಲಿ ಉನ್ನತ ಸ್ಥಾನಕ್ಕೆ ಏರಲು ಯತ್ನಿಸಬೇಡಿ...' ಹೀಗೆ ಕಿವಿಗೆ ಎರಕ ಹೊಯ್ಯುತ್ತಾರಂತೆ. ಯಾವ್ಯಾವುದರಲ್ಲೋ ನಂಬರ್ ವನ್ ಎಂದು ಬೀಗುತ್ತಿರುವ ಚೀನಾ ಲಿಂಗ ತಾರತಮ್ಯದಲ್ಲೂ ನಂಬರ್ ವನ್ ಸ್ಥಾನದತ್ತ ಕಣ್ಣಿಟ್ಟಿದೆಯೇ?



ಚೀನಾದಲ್ಲಿ ಗಿನ್ನೆಸ್ ದಾಖಲೆಗೆ ಸೇರಿದ ಈ ನೂಡಲ್ 10,100 ಅಡಿ ಉದ್ದವಿದೆಯಂತೆ. ಸಂಪೂರ್ಣ ಕೈಯಿಂದಲೇ ತಯಾರಾಗಿದ್ದು. ಉದ್ದದ ನೂಡಲ್ ತಿಂದರೆ ಜೀವಿತಾವಧಿಯೂ ಉದ್ದವಾಗುವುದೆಂಬ ನಂಬಿಕೆ ಅಲ್ಲಿದೆಯಂತೆ.